**ಅಭ್ಯಾಸ ಪ್ರಶ್ನೆ ಪತ್ರಿಕೆ -೪ ೧೦ ನೆಯ ತರಗತಿ ಪ್ರಥಮ ಭಾಷೆ ಕನ್ನಡ ಅಂಕಗಳು-೪೦**
**(ಬಹು ಆಯ್ಕೆ ಮಾದರಿ ಪ್ರಶ್ನೆ ಪತ್ರಿಕೆ )**
**ಸೂಚನೆಗಳು : ಕೊಟ್ಟಿರುವ ಪ್ರಶ್ನೆಗಳು ಬಹು ಆಯ್ಕೆ ಮಾದರಿಯ ಪ್ರಶ್ನೆಗಳಾಗಿವೆ . ಪ್ರತಿ ಪ್ರಶ್ನೆಗೂ ಒಂದೊಂದು ಅಂಕ ನಿಗದಿ ಪಡಿಸಲಾಗಿದೆ . ಪ್ರತಿ ಪ್ರಶ್ನೆಗೆ ಕೊಟ್ಟಿರುವ ನಾಲ್ಕು ಆಯ್ಕೆಗಳಲ್ಲಿ ಸರಿಯಾದ ಉತ್ತರವನ್ನು ಆರಿಸಿ ಬರೆಯಿರಿ .**

1 . ಗಡಿ ಪ್ರದೇಶಗಳಲ್ಲಿ ಬ್ಲಾಕ್ ಔಟ್ ನಿಯಮವನ್ನು ಜಾರಿಗೆ ತರುವುದರ ಉದ್ದೇಶ ——-
A) ಶತ್ರುಗಳ ಮೇಲೆ ದಾಳಿ ಮಾಡಲು B) ವಿಮಾನ ದಾಳಿಯಿಂದ ರಕ್ಷಿಸಿಕೊಳ್ಳಲು C) ಕತ್ತಲೆಯಲ್ಲಿ ಆಶ್ರಯ ಪಡೆಯಲು D ) ಕತ್ತಲೆಯಲ್ಲಿ ಸಂಚರಿಸಲು

2. ತೀರ ಕಣ್ಣಿಗೆ ಬಿದ್ದಾಗ ರಾಹಿಲನ ದೇಹದಲ್ಲಿ ಸಂಚಾರವಾದದ್ದು ———
A) ಶಕ್ತಿ B) ವಿದ್ಯುತ್ C) ಹೊಸರಕ್ತ D) ಮಿಂಚು

3.ಶಬರಿ ರಾಮನಿಗಾಗಿ ಸಂಗ್ರಹಿಸಿದ್ದು —-
A) ಹಸುವಿನ ಹಾಲು B) ಎಳನೀರು C)ಹೂ ಹಣ್ಣು ತಳಿರು D) ರೇಷ್ಮೆ ಬಟ್ಟೆ

4 . ಶ್ರೀರಾಮನು ಸೀತಾ ಲಕ್ಷ್ಮಣರೊಂದಿಗೆ ವನವಾಸದಲ್ಲಿದ್ದಾಗ ಮೊತ್ತಮೊದಲು ಆಶ್ರಮ ಕಟ್ಟಿಕೊಂಡಿದ್ದ ಸ್ಥಳ —-
A)ದಂಡಕಾರಣ್ಯ B)ಚಿತ್ರಕೂಟ C)ಪಂಚವಟಿ D) ಕಿಷ್ಕಿಂದೆ

5 .ಬ್ರಿಟಿಷ್ ಸರ್ಕಾರ ವಿಶ್ವೇಶ್ವರಯ್ಯನವರಿಗೆ ನೀಡಿದ ಪದವಿ —-
A)ಸರ್ B)ಭಾರತ ರತ್ನ C) ಪದ್ಮಶ್ರೀ D) ಪದ್ಮವಿಭೂಷಣ

6.ಮೈಸೂರು ವಿಶ್ವವಿದ್ಯಾನಿಲಯವನ್ನು ಸ್ಥಾಪಿಸಿದ ಕೀರ್ತಿ ಇವರಿಗೆ ಸಲ್ಲುತ್ತದೆ —
A) ಜವಾಹರಲಾಲನೆಹರು B)ಸರ್. ಎಂ. ವಿಶ್ವೇಶ್ವರಯ್ಯ C) ಲಾರ್ಡ್ ಸಂಡ್ ಹರ್ಸ್ಟ್ D)ನಾಲ್ವಡಿ ಕೃಷ್ಣರಾಜ ಒಡೆಯರು

7 . ಗ್ರಾಮದೇವತೆಯ ಕತೆ ಹೇಳಿದ ಕವಿ
A)ದೇವನೂರ ಮಹಾದೇವ B) ಸಿದ್ಧಲಿಂಗಯ್ಯ C) ಅಶೋಕ ಪೈ D) ಕುವೆಂಪು

8. ದೇವನೂರ ಮಹಾದೇವ ಅವರು ಜನಿಸಿದ ಜಿಲ್ಲೆ
A) ಮೈಸೂರು B)ಶಿವಮೊಗ್ಗ C)ಚಿಕ್ಕಮಗಳೂರು D)ಚಾಮರಾಜನಗರ

9 . ಚಿಕ್ಕನಾಯಕನಹಳ್ಳಿಯಿಂದ ತಮ್ಮ ಊರಿಗೆ ತಲುಪಬೇಕಾದರೆ ಶಾನುಭೋಗರು ಈ ಕಣಿವೆಯನ್ನು ದಾಟಿ ಹೋಗಬೇಕಿತ್ತು ——
A) ಬೋರನಕಣಿವೆ B) ಮದಲಿಂಗನ ಕಣಿವೆ C)ಹುತ್ರಿದುರ್ಗ D) ಮಾಧವನ ಕಣಿವೆ

10 .ಗೋವಿನಹಾಡು ಎಂಬ ಜನಪ್ರಿಯ ಜನಪದ ಕಥನ ಕಾವ್ಯದಲ್ಲಿ ಬರುವ ಗೋವಿನ ಹೆಸರು ———-
A) ಪುಣ್ಯಕೋಟಿ B)ನಂದಿನಿ C) ಕಾಮಧೇನು D) ಅಶ್ವಿನಿ

mamatabhagwat1@gmail.com ಕನ್ನಡತಿ ಮಮತಾ ಭಾಗ್ವತ್ 8762171344

**11. ಕರ್ಣಾಟಕ ಪಂಚತಂತ್ರಂ ಕೃತಿಯಿಂದ ಆರಿಸಲಾದ ಗದ್ಯ**
**A)ವ್ಯಾಘ್ರಗೀತೆ B) ಭಾಗ್ಯಶಿಲ್ಪಿಗಳು C) ಶಬರಿ D)ವೃಕ್ಷಸಾಕ್ಷಿ**

**12.ಹುಸಿಯದ ಬೇಹಾರಿಯೇ ಇಲ್ಲ ಎಂದು ಹೇಳಿದವರು ———-**
**A) ದುಷ್ಟಬುದ್ಧಿ B) ಧರ್ಮಬುದ್ಧಿ C)ಪ್ರೇಮಮತಿ D) ಧರ್ಮಾಧಿಕರಣರು**

**13.ಯಾವ ಎಚ್ಚರದೊಳು ಬದುಕಬೇಕು ?**
**A) ಮತಗಳು ಶ್ರೇಷ್ಠ B) ಮತಗಳೆಲ್ಲವೂ ಬೆಳಕು C) ಮತಗಳೆಲ್ಲವೂ ಪಥಗಳು D) ಮತಗಳೆಲ್ಲವೂ ನದಿಗಳು**

**14. ಯಾವುದಕ್ಕೆ ಮುಂಗಾರಿನ ಮಳೆಯಾಗಬೇಕು ?**
**A) .ಕಲುಷಿತವಾದ ಭೂಮಿಗೆ B)ಕಲುಷಿತವಾದ ಗಾಳಿಗೆ C) ಕಲುಷಿತವಾದ ಪರ್ವತಗಳಿಗೆ D)ಕಲುಷಿತವಾದ ನದೀ ಜಲಗಳಿಗೆ**

**15. ಹಕ್ಕಿಯು ಯಾವುದರ ಸಂಕೇತವಾಗಿದೆ ?**
**A) ಕಾಲದ B) ಜೀವನದ C) ಸಮುದ್ರದ D) ಆಕಾಶದ**

**16 . ಹಕ್ಕಿ ಯಾವ ವೇಗದಲ್ಲಿ ಹಾರುತ್ತಿದೆ ?**
**A)ಚಿಗರೆಯ ವೇಗದಲ್ಲಿ B) ಕಣ್ಣು ರೆಪ್ಪೆ ಮುಚ್ಚಿ ತೆರೆಯುವ ವೇಗದಲ್ಲಿ C) ನಾಗಾಲೋಟದಲ್ಲಿ D) ಜಲಪಾತದ ರಭಸದ ವೇಗದಲ್ಲಿ**

**17 .ಕುಂಪಣಿ ಸರ್ಕಾರ ಜಾರಿಗೆ ತಂದ ಶಾಸನ**
**A) ಯುದ್ಧ ಶಾಸನ B) ಕಬುಲ ಶಾಸನ C ) ಕುರ್ತಕೋಟಿ ಶಾಸನ D) ನಿಶ್ಯಸ್ತ್ರೀಕರಣ**

**18. ಲಾವಣಿಕಾರ ಅಂಕಿತಗೊಳಿಸಿರುವ ದೈವ**
**A)ಕಲ್ಮೇಶ B)ಹನುಮ C) ರಾಮ D) ಜಡಗ**

**19.ದನುಜರಿಪು ಎಂದರೆ ಯಾರು ———-**
**A) ಭೀಮ B) ಕೃಷ್ಣ C) ಅರ್ಜುನ D)ಕರ್ಣ**

**20.ಯಾವ ರಾಜ್ಯದ ಅಧಿಕಾರ ನಿನಗೆ ಸಿಗುವಂತೆ ಮಾಡುವೆನು ಎಂದು ಕೃಷ್ಣನು ಕರ್ಣನಿಗೆ ಹೇಳುತ್ತಾನೆ ?**
**A) ಮಗಧ B) ಮಾದ್ರ ದೇಶ C)ಗಾಂಧಾರ D) ಹಸ್ತಿನಾವತಿ**

**21.ಸಂಜೆಯ ಬಿಸಿಲು ಕವಿಗೆ ಯಾವ ಬಣ್ಣದಲ್ಲಿ ಕಾಣಿಸಿದೆ ?**
**ಎ) ಕೆಂಪು ಬಿ) ಗುಲಾಬಿ ಸಿ) ಕೇಸರಿ ಡಿ) ಹಸುರು**

**22. ಕವಿಯು ನೋಡಿದ ಅಡಕೆಯ ತೋಟ ಇರುವುದು**
**A) ಬೆಟ್ಟದ ತುದಿ B) ಪರ್ವತದ ಅಂಚು C ) ಸಮುದ್ರದ ತೀರ D) ಬನದ ಅಂಚು**

**23.ಕವಿಚಕ್ರವರ್ತಿ ಎಂಬ ಬಿರುದು ಹೊಂದಿದ್ದ ಕವಿ**
**A) ಲಕ್ಷ್ಮೀಶ B)ರನ್ನ C) ಪಂಪ D) ಕುಮಾರವ್ಯಾಸ**

**24 . ದುರ್ಯೋಧನನು ಶರಶಯ್ಯೆಯಲ್ಲಿ ಮಲಗಿದ್ದ ಭಿಷ್ಮರನ್ನು ನೋಡಲು ಬಂದ ಕಾರಣ**
**A)ಯುದ್ಧವನ್ನು ನಿಲ್ಲಿಸಲು B) ಪಾಂಡವರೊಂದಿಗೆ ಸಂಧಿ ಮಾಡಿಸಿ ಎಂದು ಕೇಳಲು C) ಯುದ್ಧದ ಕುರಿತು ಭೀಷ್ಮರ ಸಲಹೆ ಪಡೆಯಲು A) ಯುದ್ಧ ಮಾಡುವುದಿಲ್ಲ ಎಂದು ತನ್ನ ತೀರ್ಮಾನ ತಿಳಿಸಲು**

**25.ಲಕ್ಷ್ಮೀಶ ಕವಿಯ ಕಾಲ**
**A) ಕ್ರಿ. ಶ.೧೫೫೦ B) ಕ್ರಿ. ಶ . ೧೬೫೦ C) ಕ್ರಿ. ಶ. ೧೭೫೦ D) ಕ್ರಿ. ಶ. ೧೮೫೦**

**26 .ರಾಮನು ಅಶ್ವಮೇಧ ಯಾಗವನ್ನು ಕೈಗೊಳ್ಳಲು ಕಾರಣ — —**
**A) ತನ್ನ ಶ್ರೇಷ್ಠತೆಯನ್ನು ಸಾಬೀತು ಪಡಿಸಲು B) ಬೇರೆ ರಾಜರನ್ನು ಭಯಪಡಿಸಲು C) ಯುದ್ಧದ ಮೇಲಿನ ಅಭಿಮಾನದಿಂದ D) ಬ್ರಹ್ಮಹತ್ಯಾ ದೋಷ ಪರಿಹರಿಸಿಕೊಳ್ಳಲು**

**27. ವಿವೇಕಾನಂದರು ಶೂದ್ರವರ್ಗ ತನ್ನ ಯಾವ ಸ್ವಭಾವವನ್ನು ಬಿಟ್ಟು ಹೊರಬರಬೇಕೆಂದು ಕರೆ ಕೊಟ್ಟಿದ್ದಾರೆ ?**
**A)ಊಳಿಗ ಸ್ವಭಾವ B) ಸಂಕೋಚ ಸ್ವಭಾವ C) ಭಯದ ಸ್ವಭಾವ D ) ವಾಚಾಳಿ ಸ್ವಭಾವ**

**28. ವಸಂತ ಮುಖ ತೋರದಿರುವುದು —-**
**A) ಕಮ್ಮಾರನಿಗೆ B) ನೇಕಾರ ,ಕುಂಬಾರರಿಗೆ C) ಕೇರಿಯ ಮಾರನಿಗೆ**
**D)ಮೇಲಿನ ಎಲ್ಲರಿಗೂ**

**29. ಭಗತ್ ಸಿಂಗ್ ನ ಪ್ರಿಯವಾದ ಹಣ್ಣು**
**A) ಮಾವು B) ಸೇಬು D) ದ್ರಾಕ್ಷಿ D) ಕಿತ್ತಳೆ**

**30.ಬಗಲಲ್ಲಿ ಕಕ್ಕುವುದು ಬಾಯಲ್ಲಿ ತಿನ್ನುವುದು**
**A) ಕೋಳಿ B) ಕೊಕ್ಕರೆ C) ಬೀಸುಕಲ್ಲು D) ಯಂತ್ರ**

**31 . ಸಂದೆಯ ಪದದ ತತ್ಸಮ ರೂಪವಿದು — —-**
**A) ಸಂದೇಯ B)ಸಂದೇಹ C) ನಿಸ್ಸಂದೇಹ D)ಸಂದೇಶ**

**32 . ತಲೆನೋವು ಪದವು ಈ ಸಮಾಸದ ಉದಾಹರಣೆಯಾಗಿದೆ — —**
**A) ದ್ವಿಗು B) ಅಂಶಿ C) ದ್ವಂದ್ವ D) ತತ್ಪುರುಷ**

**33.ಇವುಗಳಲ್ಲಿ ಪರಿಮಾಣವಾಚಕ ನಾಮಪದಕ್ಕೆ ಉದಾಹರಣೆಯಾದ ಪದ —-**
**A) ಎಂಬತ್ತು B) ಹಲವು C) ಮೂಡಣ D) ದೊಡ್ಡದು**

34. ಒಂದು ಅಥವಾ ವಾಕ್ಯಗಳು ಒಂದು ಪ್ರಧಾನ ವಾಕ್ಯಕ್ಕೆ ಅಧೀನಗಳಾಗಿದ್ದರೆ ಅಂಥ ವಾಕ್ಯವು
A) ಸಾಮಾನ್ಯ B) ನಿಷೇಧ C) ಮಿಶ್ರ D) ಸಂಯೋಜಿತ

35. ಮನಸ್ಸಿದ್ದರೆ ——
A) ಗುರಿ ಸಾಧನೆ B)ಗೆಲುವು C) ನನಸು D) ಮಾರ್ಗ

36. ತುತ್ತತುದಿ ಪದವು ಈ ವ್ಯಾಕರಣಾಂಶದ ಉದಾಹರಣೆಯಾಗಿದೆ —-
A) ಜೋಡುನುಡಿ B) ದ್ವಿರುಕ್ತಿ C) ಅನುಕರಣಾವ್ಯಯ D) ನುಡಿಗಟ್ಟು

37 . ಷಷ್ಠಿ ವಿಭಕ್ತಿಯ ಕಾರಕಾರ್ಥ ——
A)ಸಂಬಂಧ B) ಸಂಪ್ರದಾನ C) ಅಪಾದಾನ D) ಕರ್ಮಾರ್ಥ

38. ವಾರ್ಧಕ ಷಟ್ಪದಿಯ ಸಾಲುಗಳಲ್ಲಿರುವ ಒಟ್ಟು ಮಾತ್ರೆಗಳ ಸಂಖ್ಯೆ —— ——
A) ೧೧೪ B) ೧೪೪ C) ೭೨ D) ೧೦೨

39. ವದನಾರವಿಂದ ಇಲ್ಲಿರುವ ಅಲಂಕಾರ
A) ಉತ್ಪ್ರೇಕ್ಷೆ B) ಉಪಮಾ C)ದೃಷ್ಟಾಂತ D) ರೂಪಕ

40 . ಶಾಲಾ ವಾರ್ಷಿಕೋತ್ಸವ ಕಾರ್ಯಕ್ರಮಕ್ಕೆ ಆಹ್ವಾನಿಸಿ ಗೆಳತಿಗೆ ಬರೆಯುವ ಪತ್ರವು —-
A) ಖಾಸಗಿ ಪತ್ರ B) ವ್ಯಾವಹಾರಿಕ ಪತ್ರ C) ಆದೇಶ ಪತ್ರ D) ಮನವಿ ಪತ್ರ